# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: | 829 (883) |
| ಉತ್ತರಿಸಬೇಕಾದ ದಿನಾಂಕ: | 11.03.2026 |
| ಸದಸ್ಯರ ಹೆಸರು: | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ಸಚಿವರು: | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಭೂ ದಾಖಲೆಗಳನ್ನು (ಆರ್ ಟಿಸಿ/ಪಹಣಿ) ಸಮಯಕ್ಕೆ ಸರಿಯಾಗಿ ನವೀಕರಿಸದಿರುವುದರಿಂದ ರೈತರಿಗೆ ಸಾಲ ಮತ್ತು ಬೆಳೆ ವಿಮೆಗಾಗಿ ತೊಂದರೆ ಉಂಟಾಗುತ್ತಿದೆಯೇ; | ಭೂ ದಾಖಲೆಗಳನ್ನು (ಆರ್‌ಟಿಸಿ/ಪಹಣಿ) ಸಮಯಕ್ಕೆ ಸರಿಯಾಗಿ ಕಾಲೋಚಿತಗೊಳಿಸಲು ಭೂಮಿ ತಂತ್ರಾಂಶ ಮತ್ತು ಕಾವೇರಿ ತಂತ್ರಾಂಶವನ್ನು ಸಂಯೋಜನೆ ಮಾಡಲಾಗಿರುತ್ತದೆ. ಅದರಂತೆ ಕಾವೇರಿ ತಂತ್ರಾಂಶದಲ್ಲಿ ನೋಂದಣಿ ಮಾಡುವಾಗ ಭೂಮಿ ತಂತ್ರಾಂಶದಿಂದ ಮಾಹಿತಿಯನ್ನು fetch ಮಾಡಲಾಗುತ್ತದೆ ಹಾಗೂ ನೋಂದಣಿಯಾದ ನಂತರ ಸದರಿ ಮಾಹಿತಿಯನ್ನು ಆಗಿಂದಾಗ್ಗೆ ಭೂಮಿ ತಂತ್ರಾಂಶಕ್ಕೆ ವರ್ಗಾಯಿಸಲಾಗುತ್ತದೆ.<br>ಮುಂದುವರೆದು ಎಲ್ಲಾ ನೋಟೀಸು ರಹಿತ ಹಾಗೂ ನೋಟೀಸು ಸಹಿತ ಮ್ಯುಟೇಶನ್ ಗಳು ಸರ್ವರ್ ಸಹಿ ಮೂಲಕ ಸ್ವಯಂಚಾಲಿತವಾಗಿ ಅನುಮೋದನೆಯಾಗುವಂತೆ ಭೂಮಿ ತಂತ್ರಾಂಶದಲ್ಲಿ ಮಾರ್ಪಾಡು ಮಾಡಲಾಗಿರುತ್ತದೆ. |
| ಆ | 10-15 ವರ್ಷಗಳಿಗೂ ಹೆಚ್ಚು ಕಾಲ ಬಾಕಿ ಇರುವ ಭೂ ಮಾಲೀಕತ್ವದ ವಿವಾದಗಳನ್ನು ಪರಿಹರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು; | ದಿನಾಂಕ:01.6.2006 ಕ್ಕಿಂತ ಮೊದಲು ನೋಂದಣಿಯಾಗಿರುವ ದಸ್ತಾವೇಜುಗಳಿಗೆ ಸಂಬಂಧಿಸಿದಂತೆ ಪಹಣಿ ದಾಖಲಿಸಲು ಸುತ್ತೋಲೆ ಸಂಖ್ಯೆ:RD 103 MRR 2002ದಿನಾಂಕ:29-12-2009 ಮತ್ತು RD 99 MRR 2011 ದಿನಾಂಕ:24-12-2011 ರಂತೆ ಭೂಮಿ ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿರುತ್ತದೆ.<br>ಮುಂದುವರೆದು, ಕೃಷಿ ಜಮೀನು ನೋಂದಣಿಯಾಗಿದ್ದು, ಭೂಮಿ ತಂತ್ರಾಂಶಕ್ಕೆ ಸ್ವೀಕೃತವಾಗದಿದ್ದಲ್ಲಿ, ಸದರಿ "ಜೆ" ನಮೂನೆಗಳನ್ನು ರೀ-ಪುಶ್ ಮಾಡಲು ಅವಕಾಶವಿರುತ್ತದೆ. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಇ | ನೋಂದಾಯಿತ ಭೂ ವಹಿವಾಟಿನ ನಂತರವೂ ಎಷ್ಟು ರೈತರು ರೂಪಾಂತರ ನಮೂದುಗಳಿಗಾಗಿ ಕಾಯುತ್ತಿದ್ದಾರೆ | ಕಾವೇರಿ ತಂತ್ರಾಂಶದಲ್ಲಿ ನೋಂದಣಿಯಾದ ನಂತರ ಸದರಿ ಜೆ-ನಮೂನೆಗಳು ಆನ್ ಲೈನ್ ಮೂಲಕ ಭೂಮಿ ತಂತ್ರಾಂಶಕ್ಕೆ ವರ್ಗಾವಣೆಯಾಗುತ್ತವೆ. ಸದರಿ ಮ್ಯುಟೇಶನ್ ಗಳಿಗೆ ಯಾವುದೇ ತಕರಾರು ಇಲ್ಲದಿದ್ದಲ್ಲಿ ಸ್ವಯಂಚಾಲಿತ ಮ್ಯುಟೇಶನ್ ಮೂಲಕ ಖಾತೆ ಮಾಡಲಾಗುವುದು. ಒಂದು ವೇಳೆ ತಕರಾರು ದಾಖಲಾದಲ್ಲಿ, ಸದರಿ ಮ್ಯುಟೇಶನ್ ಗಳನ್ನು ಕಂದಾಯ ನ್ಯಾಯಾಲಯಕ್ಕೆ ವರ್ಗಾಯಿಸಿ, ವಿಚಾರಣೆ ನಡೆಸಿ, ಆ ಮೂಲಕ ಖಾತೆ ದಾಖಲಿಸಲು ಕ್ರಮವಹಿಸಲಾಗುವುದು. ಅದರಂತೆ ಯಾವುದೇ ಮ್ಯುಟೇಶನ್ ಗಳನ್ನು ಭೂಮಿ ತಂತ್ರಾಂಶದಲ್ಲಿ ಬಾಕಿ ಉಳಿಸಲು ಅವಕಾಶವಿರುವುದಿಲ್ಲ. |
| ಈ | ಅತಿಕ್ರಮಣ ಮತ್ತು ನಕಲಿ ದಾಖಲೆಗಳನ್ನು ತಡೆಗಟ್ಟಲು ಎಲ್ಲಾ ಕೃಷಿ ಭೂಮಿಯನ್ನು ಡಿಜಿಟಲ್ ನಕ್ಷೆ ಮಾಡುವ ಯೋಜನೆ ಇದೆಯೇ? (ಮಾಹಿತಿ ನೀಡುವುದು) | ಹೌದು. |

**ಕಂಇ 82 ಎಂಆರ್‌ಆರ್ 2026**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು